1. ಜನಸಂಖ್ಯೆ ಕನಿಷ್ಟ 20,000ಕ್ಕಿಂತ ಹೆಚ್ಚು, 30,000ಕ್ಕಿಂತ ಕಡಿಮೆ ಇರಬೇಕು.

2. ಪ್ರತಿ ಚದರ ಕಿಲೋಮೀಟರ್ ವಿಸ್ತೀರ್ಣದಲ್ಲಿನ ಜನಸಾಂದ್ರತೆ 1500ಕ್ಕಿಂತ ಹೆಚ್ಚಿರಬೇಕು.

3. ಸ್ಥಳೀಯ ಆಡಳಿತದಿಂದ ಸಂಗ್ರಹಿಸಿದ ಕಂದಾಯವು ಹಿಂದಿನ ಜನಗಣತಿ ವರ್ಷದಲ್ಲಿ ತಲಾ ಆದಾಯ 45 ರೂ.ಗಳಂತೆ ಲೆಕ್ಕ ಹಾಕಿದಂತೆ, ಅಥವಾ ಕನಿಷ್ಟ 9 ಲಕ್ಷ ಇವೆರಡರಲ್ಲಿಯಾವುದು ಗರಿಷ್ಟವೋ ಆ ಮಟ್ಟದಲ್ಲಿರಬೇಕು.

4. ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶವು ಒಟ್ಟು ಉದ್ಯೋಗದ ಶೇಕಡ 50ಕ್ಕಿಂತ ಹೆಚ್ಚಿರಬೇಕು.

ಇ) ಪಟ್ಟಣ ಪಂಚಾಯತಿಗಳನ್ನು ಪುರಸಭೆಗಳನ್ನಾಗಿ ಪರಿವರ್ತಿಸುವಲ್ಲಿ, ಕರ್ನಾಟಕ ಪುರಸಭೆ ಅಧಿನಿಯಮ 1964ರ ಪರಿಚ್ಛೇದ 3ರನ್ವಯ ಸಂಬಂಧಿಸಿದ ಜಿಲ್ಲಾಧಿಕಾರಿಯವರಿಂದ ಬರುವ ಪ್ರಸ್ತಾವನೆಗಳನ್ನು ಸರ್ಕಾರ ಪರಿಶೀಲಿಸುತ್ತದೆ.

ಈ) 1993ರ ತರುವಾಯ ಯಾವುದೇ ಪಟ್ಟಣ ಪಂಚಾಯತಿಗಳನ್ನು ಪುರಸಭೆಯನ್ನಾಗಿ ಪರಿವರ್ತಿಸಿರುವುದಿಲ್ಲ.

ಬೆಳ್ಳಿ ಬೆಳಕು ಕಾರ್ಯಕ್ರಮ.

245(92)

ಶ್ರೀ ಅಂಜನಮೂರ್ತಿ(ನೆಲಮಂಗಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕ ರಾಜ್ಯಾದ್ಯಂತ ಎಷ್ಟು ಗೊಲ್ಲರಹಟ್ಟಿಗಳು ಬೆಳ್ಳಿ ಬೆಳಕಿನ ಕಾರ್ಯಕ್ರಮದಲ್ಲಿ ಸೇರಿವೆ; ಈ ಕಾರ್ಯಕ್ರಮಕ್ಕಾಗಿ ಸರ್ಕಾರದಿಂದ ಬಿಡುಗಡೆಯಾದ ಹಣವೆಷ್ಟು?

2) ನೆಲಮಂಗಲ ಮತಕ್ಷೇತ್ರದಲ್ಲಿ ಎಷ್ಟು ಗೊಲ್ಲರಹಟ್ಟಿಗಳು ಈ ಕಾರ್ಯಕ್ರಮದಡಿಯಲ್ಲಿ ಸೇರಿವೆ; ಅವುಗಳ ಅಭಿವೃದ್ಧಿಗೆ ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

1) ಒಟ್ಟು 15 ಗ್ರಾಮಗಳು 'ಬೆಳ್ಳಿಬೆಳಕು' ಕಾರ್ಯಕ್ರಮದಲ್ಲಿ ಸೇರಿವೆ. ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ರೂ. 170.49 ಲಕ್ಷ ಬಿಡುಗಡೆ ಮಾಡಲಾಗಿದೆ.

2) ನೆಲಮಂಗಲ ಮತಕ್ಷೇತ್ರದಲ್ಲಿ ಈ ಕಾರ್ಯಕ್ರಮದಡಿ ಯಾವುದೇ ಗೊಲ್ಲರಹಟ್ಟಿಗಳು ಸೇರಿರುವುದಿಲ್ಲ.

ಗುಡಿ ಕೈಗಾರಿಕೆಗಳು ಕಣ್ಮರೆಯಾಗುತ್ತಿರುವುದರ ಬಗ್ಗೆ.

247(571)

ಶ್ರೀ ಅಂಗಾರ ಎಸ್.(ಸೂಳ್ಯ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಾಂದೀಜಿಯವರ ''ಗ್ರಾಮೋದಯ'' ಕಲ್ಪನೆಯ ಗುಡಿ ಕೈಗಾರಿಕಾಗಳಲ್ಲೊಂದಾದ ''ಕುಂಬಾರಿಕೆ'' ಮಡಕೆ ವೃತ್ತಿ ಕೆಲಸ ಕಣ್ಮರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ತಲತಲಾಂತರದ ವಂಶಪಾರಂಪರಿಕ ಕಸುಬು ನಶಿಸಿಹೋಗದಂತೆ ಯಾವ ಮುಂಜಾಗರೂಕ ಕ್ರಮ ಕೈಗೊಳ್ಳಲಾಗುವುದು?

ಇ) ಗ್ರಾಮೋದ್ಯೋಗ ಕಾಪಾಡುವ ದಿಕ್ಕಿನಲ್ಲಿ ಈ ಸಮುದಾಯಕ್ಕೆ ಸರ್ಕಾರದ ವಿಶೇಷ ಸೌಲಭ್ಯಗಳನ್ನು ಕಲ್ಪಿಸಲಾಗುವುದೇ?

ಈ) ಸದರಿ ಸೌಲಭ್ಯ ಹಾಗೂ ಸಹಾಯಗಳಾವುವು (ವಿವರ ಪಟ್ಟಿ ಲಗತ್ತಿಸಿ)?

ಉ) ಯಾವ ಯಾವ ಇಲಾಖೆಯಿಂದ ಈ ಪ್ರಯೋಜನ ಫಲಾನುಭವಿಗಳಿಗೆ ಲಭ್ಯವಾಗುತ್ತಿದೆ ಮತ್ತು ಸರ್ಕಾರದ ಈ ನೆರವಿನಿಂದ ''ಕುಂಬಾರ ಕಲೆ'' ಜೀವಂತವಾಗಿರಲು ಅನುಕೂಲವಾಗುವುದಿಲ್ಲವೇ?

ಶ್ರೀ ಎಸ್.ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಬಂದಿದೆ.

ಆ) ಸರ್ಕಾರವು ಆಧುನಿಕ ಶೈಲಿಯಲ್ಲಿ ಕಲಾತ್ಮಕ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಲು ಉತ್ತೇಜನ ನೀಡಿ, ಇಂದಿನ ಜನರಿಗೆ ಅವರಿಗೆ ಬೇಕಾದ ರೀತಿಯಲ್ಲಿ